# ಉಪತಹಶೀಲ್ದಾರವರ ಕಾರ್ಯಾಲಯ , ಹಂಪಸಾಗರ

ನಂ/ಕಂ/ಪಹಣಿ/ವಿವಾದ/20/15-16 ದಿನಾಂಕ : 4.3.16

ಉಪಸ್ಥಿತರು :- **ಶ್ರೀ ಎ ಚಂದ್ರನಾಯ್ಕ**
ಉಪತಹಶೀಲ್ದಾರರು , ನಾಡ ಕಾರ್ಯಾಲಯ ,
ಹಂಪಸಾಗರ

ವಾದಿ :-
1) ಶ್ರೀಮತಿ ಪಲ್ಲಾಗಟ್ಟಿ ಗುರುಶಾಂತಮ್ಮ
ಗಂಡ ದಿ ಸಣ್ಣಿಂಗಪ್ಪ,
**ಮೋರಗೇರಿ**

ಪ್ರತಿವಾದಿ :-
1) ಕಂದಾಯ ನಿರೀಕ್ಷಕರು,
ಹಂಪಸಗರ

2) ಶ್ರೀ ಪಿ ನಾಗರಾಜ

ವಿಷಯ :- ಹಗರಿಬೊಮ್ಮನಹಳ್ಳಿ ತಾಲೂಕು **ಹಂಪಸಾಗರ** ಹೋಬಳಿ **ಮೋರಗೇರಿ** ಗ್ರಾಮದ ಸ ನಂ **109/1** ವಿಸ್ತೀರ್ಣ **0.07** ಎಕರೆ ಹಾಗೂ ಸ ನಂ 424/ಎ ವಿಸ್ತೀರ್ಣ 4.10 ಎಕರೆ ಪವತಿ ಹಕ್ಕುಬದಲವಣೆ ಕುರಿತು ವಿವಾದಾಸ್ಪದವಾಗಿದ್ದು, ಪ್ರಕರಣದ ವಿಚಾರಣೆ

*****

**ಪೀಠಿಕೆ** :-

ಹಗರಿಬೊಮ್ಮನಹಳ್ಳಿ ತಾಲೂಕು **ಹಂಪಸಾಗರ** ಹೋಬಳಿ **ಮೋರಗೇರಿ** ಗ್ರಾಮದ ಸ ನಂ **109/1** ವಿಸ್ತೀರ್ಣ **0.07** ಎಕರೆ ಹಾಗೂ ಸ ನಂ 424/ಎ ವಿಸ್ತೀರ್ಣ 4.10 ಎಕರೆ ಜಮೀನು ಹಾಲೀ ಪಹಣಿ ದಾಖಲು ದಿವಂಗತ ಪಲ್ಲಾಗಟ್ಟಿ ಸಣ್ಣಿಂಗಪ್ಪ ತಂದೆ ಷಣ್ಮುಖಪ್ಪ ಇವರ ಹೆಸರಿನಲ್ಲಿ ಇರುತ್ತವೆ. ಸದರಿ ಪಟ್ಟಾದಾರರು ದಿನಾಂಕ: 11.03.2014 ರಂದು ಮರಣ ಹೊಂದಿದ್ದು, ಇವರ ಮರಣಾನಂತರ ಇವರ ಹೆಂಡತಿ ವಾದಿಗಳು ಈ ಜಮೀನುಗಳನು ಪವತಿ ವಾರಸು ಪ್ರಕಾರ ಹಕ್ಕುಬದಲಾವಣೆ ಮಾಡಲು ತಾಲೂಕ ಕಛೇರಿ ಭೂಮಿ ಕೇಂದ್ರದಲ್ಲಿ ವಹಿವಾಟು ಸಂ/379/2014-15 ಹಾಗೂ ಹಕ್ಕುಬದಲಾವಣೆ ಸಂ/ಹೆಚ್-142/15-16 ರಂತೆ ದಾಖಿಲಾಗುತ್ತಾ, ನಮೂನೆ-12 ಹಾಗೂ ನೋಟೀಸು ನಮೂನೆ-21 ಕಂದಾಯ ನಿರೀಕ್ಷಕರು, ಹಂಪಸಾಗರ ಇವರಿಗೆ ಮುಂದಿನ ಕ್ರಮಕ್ಕಾಗಿ ರವಾನೆಯಾಗಿದೆ. ಪ್ರಕರಣವನ್ನು ಕಂದಾಯ ನಿರೀಕ್ಷಕರು, ಗ್ರಾಮ ಲೆಕ್ಕಾಧಿಕಾರಿ, ಮೋರಗೇರಿ ಇವರ ದ್ವಾರ ನಮೂನೆ-12 ಹಾಗೂ ನೋಟೀಸ್ ನಮೂನೆ-21ನ್ನು ಜಾರಿಗೊಳಿಸಿರುತ್ತಾರೆ. ನೋಟೀಸುಗಳನ್ನು ಜಾರಿಮಾಡಲಾಗಿ ವಾರಸುದಾರರು ಸಹಿ ಮಾಡಿರುವುದಿಲ್ಲವೆಂದು ಉಲ್ಲೇಖಿಸುತ್ತಾ, ಪ್ರಕರಣವನ್ನು ಮುಂದಿನ ವಿಚಾರಣೆಗಾಗಿ ಈ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

22/03/16

ಪ್ರಕರಣವನ್ನು ಈ ಮೇಲಿನ ಸಂಖ್ಯೆಯಂತೆ ದಾಖಲಿಸಿಕೊಂಡು ವಿಚಾರಣೆಯನ್ನು ದಿನಾಂಕ: 15.10.2015 ರಿಂದ ಪ್ರಾರಂಭಿಸಲಾಯಿತು. ಪ್ರಕರಣದಲ್ಲಿ ಪ್ರತಿವಾದಿಗಳ ಪರವಾಗಿ ನ್ಯಾಯವಾದಿಗಳು ಹಾಜರಾಗಿ ವಕಾಲತ್ತು ವಹಿಸುತ್ತಾ, ಲಿಖಿತ ವಾದವನ್ನು ಸಲ್ಲಿಸಿರುತ್ತಾರೆ. ಇವರ ವಾದವನ್ನು ಪರಿಶೀಲಿಸಲಾಗಿ ಕಂಡಿಕೆ ಒಂದರ ಪ್ರಕಾರ ಅರ್ಜಿದಾರರು ಭೂ ಕಂದಾಯ ಅಧಿನಿಯಮ 1964 ರಂತೆ ನಮೂನೆ-19 ರಲ್ಲಿ ಅರ್ಜಿ ಸಲ್ಲಿಸಿದ್ದು ಸರಿಯಿದೆ. ಕಂಡಿಕೆ ಎರಡರ ಪ್ರಕಾರ ಅರ್ಜಿದಾರಳು ಜೀವಂತ ಇದ್ದು, ಹಾಲೀ ಲೆಕ್ಕದಾಖಲು ಪ್ರಕಾರ ಅರ್ಜಿದಾರಳು ಮೃತರ ಹೆಂಡತಿಯಿದ್ದು, ವಾರಸತ್ವ

ಪ್ರಕಾರ ಅರ್ಜಿ ಸರಿಯಿದೆ. ಕಂಡಿಕೆ ನಾಲ್ಕರ ಪ್ರಕಾರ ಪ್ರತಿವಾದಿಗಳು ಹಾಗೂ ಇವರ ವಾರಸುದಾರರು ದಿವಂಗತ ಪಲ್ಲಾಗಟ್ಟಿ ಸಣ್ಣಿಂಗಪ್ಪನ ಜೀವಿತ ಕಾಲದಲ್ಲಿ ಪಾಲುವಿಭಾಗ ಹೊಂದಿದ್ದು, ಪೂರವಾಗಿ ಪಾಲುವಿಭಾಗದ ಪ್ರತಿ ಹಾಜರುಪಡಿಸಿರುತ್ತಾರೆ ಕಂಡಿಕೆ 5ರ ಪ್ರಕಾರ ಪ್ರತಿವಾದಿಗಳ ಹಿಸ್ಸಾಕ್ಕೆ ಹಾಗೂ ಇತರೆ ವಾರಸುದಾರರಿಗೆ ಬಂದಂತಹ ಆಸ್ತಿಯಾಗಿರುವುದು ವಿಭಾಗ ಪತ್ರದಲ್ಲಿ ವಿವರಿಸಿದ ಪ್ರಕಾರ ಕಂಡುಬರುತ್ತದೆ. ಕಂಡಿಕೆ ಏಳರ ಪ್ರಕಾರ ಪಾಲು ವಿಭಾಗ ಪತ್ರ ಇರುವುದರಿಂದ ಇದರ ಅಗತ್ಯ ಇರುವುದಿಲ್ಲ. ಕಂಡಿಕೆ ಎಂಟರಲ್ಲಿ ನ್ಯಾಯವಾದಿಗಳು ತಮ್ಮ ವಾದದಲ್ಲಿ ವಾದಿಗಳ ಹೆಸರಿನಲ್ಲಿ ಹಕ್ಕುಬದಲಾವಣೆ ಮಾಡಿದ್ದೇ ಆದಲ್ಲಿ ಆಸ್ತಿಯನ್ನು ಪರಭಾರೆ ಮಾಡುವ ಅಥವಾ ಇತರೆ ಉದ್ದೇಶಕ್ಕೆ ಬಳಸಿಕೊಳ್ಳುವ ಸಾಧ್ಯತೆಯ ಬಗ್ಗೆ ವಿವರಿಸಿರುತ್ತಾರೆ. ಆದರೆ ನ್ಯಾಯಸಮ್ಮತವಾಗಿ ವಾದಿಗಳ ಹೆಸರಿನಲ್ಲಿ ಪವತಿ ಹಕ್ಕು ಬದಲಾವಣೆ ಹೊಂದದೇ ಪ್ರತಿವಾದಿಗಳು ತಾವು ಹೊಂದಿರುವ ಪಾಲುವಿಭಾಗದ ಪ್ರಕಾರ ಹಕ್ಕುಬದಲಾವಣೆ ಹೊಂದಲು ಭೂಮಿ ಕೇಂದ್ರದ ತಂತ್ರಾಂಶದಲ್ಲಿ ಅವಕಾಶ ಇರುವುದಿಲ್ಲ. ಹೀಗಾಗಿ ಪಾವತಿದಾರರರ ಹೆಸರನ್ನು ಕಡಿಮೆ ಮಾಡುತ್ತಾ, ವಾರಸು ಪ್ರಕಾರ ಪವತಿ ಹಕ್ಕು ಬದಲಾವಣೆ ಕ್ರಮವು ಅಗತ್ಯವಾಗಿರುತ್ತದೆ. ಹೀಗಾಗಿ ಪ್ರತಿವಾದಿಗಳು ತಾವು ಹೊಂದಿರುವ ಪಾಲು ವಿಭಾಗದಂತೆ ಪವತಿ ಹಕ್ಕು ಬದಲಾವಣೆ ನಂತರ ನಿಯಮಾನುಸಾರ ಹಕ್ಕುಬದಲಾವಣೆ ಹೊಂದಬೇಕಾಗಿದೆ. ಆದ್ದರಿಂದ ವಾದಿ ಪ್ರತಿವಾದಿಗಳು ಸಲ್ಲಿಸಿರುವ ಹಾಗೂ ನ್ಯಾಯವಾದಿಗಳು ಮಂಡಿಸಿರುವ ಲಿಖಿತ ವಾದವನ್ನು ಪರಿಶೀಲಿಸುತ್ತಾ, ಪ್ರಕರಣವನ್ನು ಮುಕ್ತಾಯಗೊಳಿಸುತ್ತಾ, ಈ ಕೆಳಕಂಡ

## ಆದೇಶ

**ಹಂಪಸಾಗರ** ಹೋಬಳಿ **ಮೋರಗೇರಿ** ಗ್ರಾಮದ ಸ ನಂ **109/1** ವಿಸ್ತೀರ್ಣ **0.07** ಎಕರೆ ಹಾಗೂ ಸ ನಂ 424/ಎ ವಿಸ್ತೀರ್ಣ 4.10 ಎಕರೆ ಜಮೀನುಗಳನ್ನು ಪವತಿವಾರಸು ಪ್ರಕಾರ ವಾದಿಯಾದ ಶ್ರೀಮತಿ ಪಲ್ಲಾಗಟ್ಟಿ ಗುರುಶಾಂತಮ್ಮ ಗಂಡ ದಿ.ಸಣ್ಣಿಂಗಪ್ಪ, ಮೋರಗೇರಿ ಎಂದು ಹಕ್ಕುಬದಲಾವಣೆ ಮಾಡಲು ಆದೇಶಿಸಿದೆ.

ಈ ಆದೇಶವನ್ನು ತೆರೆದ ನ್ಯಾಯಾಲಯದಲ್ಲಿ ದಿನಾಂಕ : 14.3.16 ರಂದು ಘೋಷಿಸಲಾಗಿದೆ.

ಉಪತಹಶೀಲ್ದಾರರು,
ನಾಡ ಕಛೇರಿ,
ಹಂಪಸಾಗರ.

ಇವರಿಗೆ

1) ವಾದಿ ಮತ್ತು ಪ್ರತಿವಾದಿಗಳಿಗೆ ಮಾಹಿತಿಗಾಗಿ
2) ಶಿರಸ್ತೇದಾರರು ಭೂಮಿ ಕೇಂದ್ರ , ತಾಲೂಕು ಕಛೇರಿ , ಹಬೊಹಳ್ಳಿ ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸಲಾಗಿದೆ.
3) ಕಂದಾಯ ಪರಿವೀಕ್ಷಕರು , ಹಂಪಸಾಗರ ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸಲಾಗಿದೆ
4) ಪ್ರತಿ ಕಡತಕ್ಕೆ